**ದಿನಾಂಕ : 29.09.2011ರ ಗುರುವಾರ ಪೂರ್ವಾಹ್ನ 11.30 ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಸಜಿಲ್ ಕೃಷ್ಣ.ಪಿ. ರವರ ಅಧ್ಯಕ್ಷತೆಯಲ್ಲಿ ಪ್ರಾಧಿಕಾರದ ಕಛೇರಿ ಸಭಾಂಗಣದಲ್ಲಿ ನಡೆದ ಪ್ರಾಧಿಕಾರದ ಸಭೆಯ ನಡಾವಳಿ.**

| ಕ್ರ. ಸಂ | ಹಾಜರಿದ್ದ ಸದಸ್ಯರು | ಗೈರು ಹಾಜರಿದ್ದ ಸದಸ್ಯರು |
|---|---|---|
| 1. | ಶ್ರೀ ಸಜಿಲ್ ಕೃಷ್ಣ .ಪಿ ರವರು, ಅಧ್ಯಕ್ಷರು<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | ಮಾನ್ಯ ಶ್ರೀ ಕೆ.ಜಿ.ಬೋಪಯ್ಯ ರವರು, ಸದಸ್ಯರು<br>ವಿಧಾನ ಸಭಾ ಪತಿಗಳು ಹಾಗೂ ವಿಧಾನಸಭಾ ಸದಸ್ಯರು, ವಿರಾಜಪೇಟೆ ಕ್ಷೇತ್ರ. |
| 2. | ಆರಕ್ಷಕ ಅಧೀಕ್ಷಕರು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. | ಮಾನ್ಯ ಶ್ರೀ ಅಪ್ಪಚ್ಚುರಂಜನ್ ರವರು, ಸದಸ್ಯರು<br>ವಿಧಾನ ಸಭಾ ಸದಸ್ಯರು, ಮಡಿಕೇರಿ ಕ್ಷೇತ್ರ. |
| 3. | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸದಸ್ಯರು<br>ಕಲ್ಯಾಣಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ. | ಮಾನ್ಯ ಶ್ರೀ ಎಂ.ಸಿ.ನಾಣಯ್ಯ ರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. |
| 4. | ಪೌರಾಯುಕ್ತರು, ಸದಸ್ಯರು<br>ನಗರಸಭೆ, ಮಡಿಕೇರಿ. | ಮಾನ್ಯ ಶ್ರೀ ಟಿ.ಜಾನ್ ರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. |
| 5. | ಕಾರ್ಯಪಾಲಕ ಅಭಿಯಂತರರು<br>ಸದಸ್ಯರು ಲೋಕೋಪಯೋಗಿ ಇಲಾಖೆ, ಮಡಿಕೇರಿ. | ಮಾನ್ಯ ಜಿಲ್ಲಾಧಿಕಾರಿಯವರು, (ಪರವಾಗಿ) ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. |
| 6. | ಕಾರ್ಯಪಾಲಕ ಅಭಿಯಂತತರು<br>ಸದಸ್ಯರು<br>ಕೆ.ಯು.ಡಬ್ಲ್ಯೂ.ಎಸ್ ಅಂಡ್ ಡಿ.ಬಿ, ಮೈಸೂರು. | ಕಾರ್ಯಪಾಲಕ ಅಭಿಯಂತರರು ಆಹ್ವಾನಿತರು<br>ಕರ್ನಾಟಕ ಗೃಹ ಮಂಡಳಿ, ಮೈಸೂರು. |
| 7. | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಚೆಸ್ಕಾಂ, ಮಡಿಕೇರಿ. | ವಿಭಾಗೀಯ ನಿಯಂತ್ರಕರು, ಆಹ್ವಾನಿತರು<br>ಕೆ.ಎಸ್.ಆರ್.ಟಿ.ಸಿ. ಮೈಸೂರು ವಿಭಾಗ, ಮೈಸೂರು. |
| 8. | ನಗರ ಯೋಜನಾ ಸದಸ್ಯರು, ಪ.ನಿ.ಸದಸ್ಯರು<br>ನಗರಾಭಿವೃದ್ಧಿ ಪ್ರಾಧಿಕಾರ,ಮಡಿಕೇರಿ. | ಜಂಟಿ ನಿರ್ದೇಶಕರು, ಆಹ್ವಾನಿತರು<br>ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಗು ಜಿಲ್ಲೆ, ಮಡಿಕೇರಿ. |
| 9. | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಆಹ್ವಾನಿತರು<br>ಮಡಿಕೇರಿ ಉಪ ವಿಭಾಗ, ಮಡಿಕೇರಿ. | |
| 10. | ಶ್ರೀ ಅಶಾದ್ ಉರ್ ರೆಹೆಮಾನ್ ಷರೀಫ್ ಆಯುಕ್ತರು<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | |

ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಪ್ರಾಧಿಕಾರದ ಸದಸ್ಯರುಗಳು ಹಾಗೂ ಆಹ್ವಾನಿತರುಗಳನ್ನು ಸಭೆಯುಲ್ಲಿ ಸ್ವಾಗತಿಸುತ್ತಾ ಸಭಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

**1) ವಿಷಯ ಸಂಖ್ಯೆ : 1**

ಹಿಂದಿನ ಸಭೆಯ (ದಿನಾಂಕ: 04.08.2011ರ ಸಭೆಯ) ನಡಾವಳಿಯನ್ನು ಓದಿ ಅಂಗೀಕರಿಸುವುದು.

**ನಿರ್ಣಯ:–** ಹಿಂದಿನ ಸಭೆಯ ನಡಾವಳಿಯನ್ನು ಓದಿ ಅಂಗೀಕರಿಸಲಾಯಿತು.

**2) ವಿಷಯ ಸಂಖ್ಯೆ :2**

2011ನೇ ಜುಲೈ ಮತ್ತು ಆಗಸ್ಟ್ ತಿಂಗಳ ಜಮಾ ಖರ್ಚುಗಳನ್ನು ಅಂಗೀಕರಿಸುವ ಬಗ್ಗೆ.

**ಟಿಪ್ಪಣಿ:–** ಜಮಾ ಖರ್ಚುಗಳ ವಿವರ ಈ ಕೆಳಗಿನಂತಿವೆ.

| | | | |
|---|---|---|---|
| 1. | ಪರಿಶೀಲನಾ ಶುಲ್ಕ. | ರೂ. | 89,637.00 |
| 2. | ಕೆ.ಟಿ.ಸಿ.ಖಾಯ್ದೆ 1961ರ ಕಲಂ 18ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 36,480.00 |
| 3. | ಪತ್ರಿಕಾ ಪ್ರಕಟಣೆ ಶುಲ್ಕ | ರೂ. | 70,000.00 |
| 4. | ಪಾರ್ಕ್ ಮತ್ತು ಸಿ.ಎ. ನಿವೇಶನಕ್ಕೆ ವಿನಾಯಿತಿ ನೀಡಿ ಭರಿಸಿಕೊಂಡಿರುವ ಶುಲ್ಕ | ರೂ. | 60,14,651.00 |
| 5. | ಬ್ಯಾಂಕ್ ಬಡ್ಡಿ | ರೂ. | 18,657.00 |
| 6. | ಇತರೆ ಜಮೆ | ರೂ. | 454.00 |
| | **ಒಟ್ಟು ಜಮೆ** | **ರೂ.** | **62,29,879.00** |

**<u>ಖರ್ಚು</u>**

| | | | |
|---|---|---|---|
| 1. | ಅಧ್ಯಕ್ಷರ ಗೌರವಧನ ಮತ್ತು ಇತರೆ ಭತ್ಯೆ | ರೂ. | 38,020.00 |
| 2. | ಆಯುಕ್ತರ ವೇತನ ಮತ್ತು ಇತರೆ ಭತ್ಯೆಗಳು | ರೂ. | 49,316.00 |
| 3. | ಸಿಬ್ಬಂದಿ ವೇತನ | ರೂ. | 40,162.00 |
| 4. | ದೂರವಾಣಿ ವೆಚ್ಚ | ರೂ. | 4,819.00 |
| 5. | ವಿದ್ಯುತ್ಛಕ್ತಿ ದುರಸ್ತಿ ಮತ್ತು ವಿದ್ಯುತ್ಛಕ್ತಿ ವೆಚ್ಚ | ರೂ. | 2,123.00 |
| 6. | ಆಯುಕ್ತರ ಪ್ರಯಾಣ ಭತ್ಯೆ | ರೂ. | 1,700.00 |
| 7. | ಅಂಚೆ ಚೀಟಿ ಖರೀದಿ | ರೂ. | 1,000.00 |
| 8. | ಪ್ರಿಂಟರ್, ಫ್ಯಾಕ್ಸ್, ಯು.ಪಿ.ಎಸ್, ಬ್ಯಾಟರಿಗಳ ಖರೀದಿ ವೆಚ್ಚ ತೇಜಸ್ ಸರ್ವಿಸಸ್ ರವರಿಗೆ ಪಾವತಿ | ರೂ | 1,14,924.00 |
| 9. | ಫ್ಯಾನ್ ಖರೀದಿ ವೆಚ್ಚ ಮೆ॥ಮಹಾರಾಜ ಎಲೆಕ್ಟ್ರಿಕಲ್ಸ್ ರವರಿಗೆ ಪಾವತಿ | ರೂ. | 8,850.00 |
| 10 | ಕಂಪ್ಯೂಟರ್ ವೆಬ್‌ಸೈಟ್ ನಿರ್ವಹಣೆ ವೆಚ್ಚ ಮೆ॥ ಪ್ರೀಮಿಯರ್ ಟೆಕ್ನಾಲಜಿ ರವರಿಗೆ ಪಾವತಿ | ರೂ. | 7,500.00 |
| 11. | ಪೀಠೋಪಕರಣಗಳ ಖರೀದಿ ಮೆ॥ಡೆಕೋರೇಟಿವ್ ಲ್ಯಾಮಿನೇಟ್ಸ್ ರವರಿಗೆ ಪಾವತಿ. | ರೂ. | 1,04,675.00 |
| 12. | ವಕೀಲರ ಶುಲ್ಕ ಪಾವತಿ | ರೂ. | 1,000.00 |
| 13. | ಸ್ವಾತಂತ್ರ್ಯೋತ್ಸವ ದಿನಾಚರಣೆಗೆ ಮಾನ್ಯ ಜಿಲ್ಲಾಧಿಕಾರಿಯವರಿಗೆ ವಂತಿಕೆ ಪಾವತಿ | ರೂ. | 2,000.00 |
| | ಸಭಾ ಉಪಹಾರ ವೆಚ್ಚ | ರೂ. | 995.00 |
| | ಕಚೇರಿ ಸಾದಿಲ್ವಾರು ವೆಚ್ಚ | ರೂ. | 2,350.00 |
| | ಇಂಧನ ವೆಚ್ಚ | ರೂ. | 500.00 |
| | ಇತರೆ | ರೂ. | 60.00 |
| | **ಒಟ್ಟು ವೆಚ್ಚ** | **ರೂ.** | **3,79,994.00** |

<u>**ಘೋಷ್ವಾರೆ:**</u>

| | | | |
|---|---|---|---|
| 1. | ಜುಲೈ 2011ರ ಪ್ರಾರಂಭಿಕ ಶಿಲ್ಕು | ರೂ. | 8,36,004.00 |
| 2. | 2011 ಜುಲೈ –ಆಗಸ್ಟ್ ತಿಂಗಳ ಒಟ್ಟು ಜಮೆ | ರೂ. | 62,29,879.00 |
| 3. | ಒಟ್ಟು ಜಮೆ | ರೂ. | 70,65,883.00 |
| 4. | 2011 ಜುಲೈ –ಆಗಸ್ಟ್ ತಿಂಗಳ ಖರ್ಚು | ರೂ. | <u>3,79,994.00</u> |
| 5. | 2011 ನೇ ಜುಲೈ ತಿಂಗಳ ಆಖೈರು ಶಿಲ್ಕು | ರೂ. | **66,85,889.00** |

ಮೇಲಿನ ಜಮಾ ಮತ್ತು ಖರ್ಚುಗಳಿಗೆ ಸಭೆಯ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**ನಿರ್ಣಯ:–**ಮೇಲಿನ ಜಮಾ ಖರ್ಚುಗಳಿಗೆ ಸಭೆಯು ಅಂಗೀಕಾರ ನೀಡಿತು.

<u>**3) ವಿಷಯ ಸಂಖ್ಯೆ 3:– ಗದ್ದಿಗೆ ವ್ಯಾಪ್ತಿಯಲ್ಲಿ ಉದ್ಯಾನವನ ಅಭಿವೃದ್ಧಿ ಪಡಿಸುತ್ತಿರುವ ಬಗ್ಗೆ.**</u>

**ಟಿಪ್ಪಣಿ:–** ಮಡಿಕೇರಿ ನಗರದ ಗದ್ದಿಗೆ ವ್ಯಾಪ್ತಿಯಲ್ಲಿ ಬರುವ ಅಂದಾಜು 5.00 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಉದ್ಯಾನವನವನ್ನು ನಿರ್ಮಿಸಲು ಯೋಜನೆ ಹಮ್ಮಿಕೊಂಡಿದ್ದು, ಗ್ರೀನ್‌ಸ್ಪೇಸ್, ಬೆಂಗಳೂರು ರವರು ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಿರುತ್ತಾರೆ. ಸದರಿ ಯೋಜನೆಗೆ ಅಂದಾಜು ರೂ. 40,00,000/–ಲಕ್ಷ ವೆಚ್ಚವಾಗುವುದು. ಇದಕ್ಕೆ ಪ್ರಾಧಿಕಾರದ ಪ್ರತ್ಯೇಕ ನಿಧಿಯಲ್ಲಿ ಪಾರ್ಕ್ ಮತ್ತು ಸಿ.ಎ. ನಿವೇಶನಕ್ಕೆ ವಿನಾಯಿತಿ ನೀಡಿ ಪಾವತಿಸಿಕೊಂಡಿರುವ ಶುಲ್ಕದಿಂದ 5 ಹಂತಗಳಲ್ಲಿ ರೂ. 29,00,000/–ಲಕ್ಷ ಹಣವನ್ನು ಉಪಯೋಗಿಸಿಕೊಂಡು ಹೆಚ್ಚುವರಿ ಅಂದಾಜು ರೂ. 10,00,000/–ಲಕ್ಷವನ್ನು ಪ್ರಾಧಿಕಾರದ ನಿಧಿಯಿಂದ ಭರಿಸಿಕೊಳ್ಳಲು ದಿನಾಂಕ: 31.03.2011ರ ಪ್ರಾಧಿಕಾರದ ಸಭೆಯಲ್ಲಿ ಸರ್ವಾನುಮತದ ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ. ಆದರೆ ಪ್ರಾಧಿಕಾರದ ನಿಧಿಗೆ ಹೆಚ್ಚುವರಿಯಾಗಿ ಪಾರ್ಕ್ ಮತ್ತು ಸಿ.ಎ. ನಿವೇಶನದ ವಿನಾಯಿತಿ ಶುಲ್ಕ ರೂ.60,00,000/–ಲಕ್ಷ ಜಮೆಯಾಗಿರುವುದರಿಂದ ಪ್ರಾಧಿಕಾರದ ನಿಧಿಯ ಹಣವನ್ನು ಉಪಯೋಗಿಸುವ ಬದಲು ಈ ಪ್ರತ್ಯೇಕ ನಿಧಿಯ ಹಣದಿಂದಲೇ ಉದ್ಯಾನವನದ ಪೂರ್ಣ ಕಾಮಗಾರಿಗಳಿಗೆ ಉಪಯೋಗಿಸಿಕೊಂಡು ಅಭಿವೃದ್ಧಿ ಪಡಿಸಲು ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–**ಯೋಜನೆಯ ವಿವರಗಳನ್ನು ಸಭೆಯಲ್ಲಿ ಆಯುಕ್ತರು ವಿವರಿಸಿದರು. ಇದಕ್ಕೆ ಸಭೆಯು ಒಪ್ಪಿ ಸರ್ವಾನುಮತದ ಅಂಗೀಕಾರ ನೀಡಿತು.

**4) ವಿಷಯ ಸಂಖ್ಯೆ 4:– ಮಡಿಕೇರಿ ನಗರದ ಗದ್ದಿಗೆ ವ್ಯಾಪ್ತಿಯಲ್ಲಿ ಬರುವ ಜಮೀನಿನಲ್ಲಿ ಪ್ರಾಧಿಕಾರದ ವತಿಯಿಂದ ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವ ಉದ್ಯಾನವನಕ್ಕೆ ರೂ.20 ಲಕ್ಷ ವೆಚ್ಚದಲ್ಲಿ ಚೈನ್‌ಲಿಂಕ್ ಕಾಂಪೌಂಡ್ ನಿರ್ಮಿಸುವ ಬಗ್ಗೆ.**

**ಟಿಪ್ಪಣಿ:–** ದಿನಾಂಕ: 23.05.2011ರಂದು ನಡೆದ ಪ್ರಾಧಿಕಾರ ಸಭೆಯ ವಿಷಯ ಸಂಖ್ಯೆ 6ರಲ್ಲಿ ಗದ್ದಿಗೆ ವ್ಯಾಪ್ತಿಯಲ್ಲಿ ಉದ್ಯಾನವನ ನಿರ್ಮಿಸುವ ಬಗ್ಗೆ ಈಗಾಗಲೇ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು, ಉದ್ಯಾನವನವನ್ನು ನಿರ್ಮಿಸಿದ ನಂತರ ಅದನ್ನು ಸುರಕ್ಷಿತವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಕಾಂಪೌಂಡ್‌ನ್ನು ನಿರ್ಮಿಸುವುದು ಅತ್ಯಾವಶ್ಯಕವಾಗಿರುತ್ತದೆ. ಉದ್ಯಾನವನ ಅಭಿವೃದ್ಧಿ ಪಡಿಸುವ ಜಾಗಕ್ಕೆ ಮಾತ್ರ ಕಾಂಪೌಂಡ್ ನಿರ್ಮಿಸುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರು ರೂ. 20ಲಕ್ಷ ಅನುದಾನವನ್ನು ಪ್ರಾಧಿಕಾರದ ನಿಧಿಗೆ ಹಸ್ತಾಂತರಿಸುತ್ತಾರೆಂದು ತಿಳಿಸಿರುವುದರಿಂದ ಈ ಬಗ್ಗೆ ಸಹ ಟೆಂಡರ್ ಪ್ರಕ್ರಿಯೆಯನ್ನು ನಡೆಸಬಹುದೆಂದು ಸಭೆಯಲ್ಲಿ ಆಯುಕ್ತರು ವಿವರವನ್ನು ನೀಡಿದರು. ಇದಕ್ಕೆ ಸಭೆಯು ಒಪ್ಪಿ ಮಾನ್ಯ ಜಿಲ್ಲಾಧಿಕಾರಿಯವರಿಂದ ಅನುದಾನ ಬರಲು ವಿಳಂಬವಾದಲ್ಲಿ ಪ್ರಾಧಿಕಾರದ ನಿಧಿಯಿಂದಲೇ ಕಾಂಪೌಂಡನ್ನು ನಿರ್ಮಿಸಿ, ಜಿಲ್ಲಾಧಿಕಾರಿಯವರಿಂದ ಬಂದ ಅನುದಾನವನ್ನು ಪ್ರಾಧಿಕಾರದ ನಿಧಿಗೆ ತುಂಬಿಸಿಕೊಳ್ಳಬಹುದೆಂದೂ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿ, ರೂ. 20ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಆಯುಕ್ತರಿಗೆ ಮುಂದಿನ ಕ್ರಮ ನಿರ್ವಹಿಸಲು ಸೂಚಿಸಿತು. ಈ ಬಗ್ಗೆ ಈ ವೆರೆವಿಗೂ ಮಾನ್ಯ ಜಿಲ್ಲಾಧಿಕಾರಿಯವರಿಂದ ಅನುದಾನ ಬಿಡುಗಡೆಯಾಗಿರುವುದಿಲ್ಲವಾದ್ದರಿಂದ ಪ್ರಾಧಿಕಾರದ ವತಿಯಿಂದ ಚೈನ್‌ಲಿಂಕ್ ಕಾಂಪೌಂಡ್ ಗೋಡೆಯನ್ನು ನಿರ್ಮಿಸಲು

ಕ್ರಮ ಕೈಗೊಳ್ಳಬಹುದಾಗಿರುತ್ತದೆ ಹಾಗೂ ಪ್ರಾಧಿಕಾರದ ನಿಧಿಯ ಹಣವನ್ನು ಉಪಯೋಗಿಸುವ ಬದಲು ಈಗಾಗಲೇ ಪಾರ್ಕ್ ಮತ್ತು ಸಿ.ಎ. ನಿವೇಶನಕ್ಕೆ ವಿನಾಯಿತಿ ನೀಡಿ ಭರಿಸಿಕೊಂಡಿರುವ ಶುಲ್ಕ ರೂ.60,00,000ಲಕ್ಷ ಹಣದಲ್ಲಿ ರೂ.20,00,000ಲಕ್ಷವನ್ನು ಉಪಯೋಗಿಸಿಕೊಂಡು ಚೈನ್‌ಲಿಂಕ್ ಕಾಂಪೌಂಡನ್ನು ನಿರ್ಮಿಸಲು ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಿಲಾಗಿದೆ.

**ನಿರ್ಣಯ:–** ಇದಕ್ಕೆ ಸಭೆಯು ಒಪ್ಪಿ ಸದರಿ ಯೋಜನೆಯು ಸಾರ್ವಜನಿಕರ ಹಿತಾದೃಷ್ಟಿಯಿಂದ ಕೈಗೊಂಡಿರುವ ಯೋಜನೆಯಾಗಿರುವುದರಿಂದ ಅಭಿವೃದ್ಧಿ ಪಡಿಸುವ ಉದ್ಯಾನವನಕ್ಕೆ ಚೈನ್‌ಲಿಂಕ್ ಕಾಂಪೌಂಡನ್ನು ಅಳವಡಿಸಲು ಸಭೆಯು ಸರ್ವಾನುಮತದ ಆಡಳಿತಾತ್ಮಕ ಮಂಜೂರಾತಿ ನೀಡಿ ಸಂಬಂಧಿಸಿದ ಕಾಮಗಾರಿಯನ್ನು ಕೈಗೊಳ್ಳಲು ಸಂಪೂರ್ಣ ಅಧಿಕಾರವನ್ನು ಆಯುಕ್ತರಿಗೆ ನೀಡಿ ಮುಂದಿನ ಕ್ರಮ ವಹಿಸಲು ಸೂಚಿಸಲಾಯಿತು.

**<u>5) ವಿಷಯ ಸಂಖ್ಯೆ 5:– ಅರ್ಜಿದಾರರು ಶ್ರೀ ಎಂ.ಪಿ.ಮೇದಪ್ಪ.</u>**

**ಟಿಪ್ಪಣಿ:–**ಮಡಿಕೇರಿ ನಗರಸಭಾ ಬ್ಲಾಕ್ ನಂ. 14ರ ಸರ್ವೆ ನಂ.14/1ರಲ್ಲಿರುವ 0.20ಎಕರೆ ವಿಸ್ತೀರ್ಣದ ನಿವೇಶನದಲ್ಲಿ ಶ್ರೀ ಎಂ.ಪಿ.ಮೇದಪ್ಪ ನವರು ರೀಟೇಲ್ ಔಟ್‌ಲೆಟ್ ಆಫ್ ಇಂಡಿಯನ್ ಆಯಿಲ್ (ಪೆಟ್ರೋಲ್ ಬಂಕ್)ನ್ನು ನಿರ್ಮಿಸಲು ಅನುಮತಿ ಕೋರಿರುವ ಪ್ರಸ್ತಾವನೆಗೆ ದಿನಾಂಕ: 04.08.2011ರಂದು ನಡೆದ ಪ್ರಾಧಿಕಾರದ ಸಭೆಯು ಸರ್ವಾನುಮತದ ಅಂಗೀಕಾರವನ್ನು ನೀಡಿತ್ತು. ಅದರಂತೆ ಈ ಕಛೇರಿ ಪತ್ರ ಸಂಖ್ಯೆ: ಮನಅಪ್ರಾ/ಕ.ಪ/ತಾಂ.ಅಭಿ/55/2011–12, ದಿನಾಂಕ: 23.08.2011ರಂದು ಬ್ಲಾಕ್ ನಂ.14ರ ಸರ್ವೆ ನಂ.14/1 ರಲ್ಲಿರುವ 0.20ಎಕರೆ ವಿಸ್ತೀರ್ಣದ ನಿವೇಶನದಲ್ಲಿ ರೀಟೇಲ್ ಔಟ್‌ಲೆಟ್ ಆಫ್ ಇಂಡಿಯನ್ ಆಯಿಲ್ (ಪೆಟ್ರೋಲ್ ಬಂಕ್)ನ್ನು ನಿರ್ಮಿಸಲು ತಾಂತ್ರಿಕ ಆಭಿಪ್ರಾಯವನ್ನು ನೀಡಿ ನಕ್ಷೆಯನ್ನು ಅನುಮೋದಿಸಿ, ಪೌರಾಯುಕ್ತರು, ನಗರಸಭೆ, ಮಡಿಕೇರಿ ರವರಿಗೆ ಕಡತವನ್ನು ಸಲ್ಲಿಸಲಾಗಿತ್ತು.

ಆದರೆ ಪೌರಾಯುಕ್ತರು, ನಗರಸಭೆ, ಮಡಿಕೇರಿ ರವರು ಅವರ ಪತ್ರ ಸಂಖ್ಯೆ:ಎಂ3/ಕ.ಪ/51/2011–12, ದಿನಾಂಕ:08.09.2011 ರಂದು ಸದರಿ ಕಡತವನ್ನು ಮರು ಸಲ್ಲಿಸಿ, ಬ್ಲಾಕ್ ನಂ.14ರ ಸರ್ವೆ ನಂ.14/1ರಲ್ಲಿರುವ 0.20ಎಕರೆ ವಿಸ್ತೀರ್ಣದ ನಿವೇಶನದೊಂದಿಗೆ 0.18 ಎಕರೆ ವಿಸ್ತೀರ್ಣದ ಜಾಗವನ್ನು ಸೇರಿಸಿ, ಒಟ್ಟು 0.38 ಎಕರೆ ವಿಸ್ತೀರ್ಣದ ಜಾಗದಲ್ಲಿ ರೀಟೇಲ್ ಔಟ್‌ಲೆಟ್ ಆಫ್ ಇಂಡಿಯನ್ ಆಯಿಲ್(ಪೆಟ್ರೋಲ್ ಬಂಕ್)ನ್ನು ನಿರ್ಮಿಸಲು ತಾಂತ್ರಿಕ ಅನುಮೋದನೆಯನ್ನು ಕೋರಿರುತ್ತಾರೆ. ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಪ್ರಸ್ತಾವನೆಯ ಬಗ್ಗೆ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿ, ಪ್ರಾಧಿಕಾರದ ವಲಯ ನಿಯಾಮಾವಳಿಗಳನ್ವಯ ವಸತಿ ವಲಯದಲ್ಲಿ ಪೆಟ್ರೋಲ್ ಬಂಕ್ (filling station) ನಿರ್ಮಿಸಲು ಅವಕಾಶವಿರುವುದರಿಂದ ಈಗಾಗಲೇ ಸದರಿ ಸರ್ವೆ ನಂ. 14/1ರಲ್ಲಿರುವ 0.20ಎಕರೆ ವಿಸ್ತೀರ್ಣದ ನಿವೇಶನದಲ್ಲಿ ಪೆಟ್ರೋಲ್ ಬಂಕ್ (filling station) ನಿರ್ಮಿಸಲು ಅನುಮತಿ ನೀಡಿದ್ದು, ಸದರಿ ನಿವೇಶನದ ಒತ್ತಿನಲ್ಲೆ ಸರ್ವೆ ನಂ. 14/1ರಲ್ಲಿ 0.18ಎಕರೆ ವಿಸ್ತೀರ್ಣದ ನಿವೇಶನವು ಇದ್ದು ಅದನ್ನು ಸೇರಿಸಿಕೊಂಡು ಒಟ್ಟು 0.38ಎಕರೆ ನಿವೇಶನದ ವಿಸ್ತೀರ್ಣದಲ್ಲಿ ಪೆಟ್ರೋಲ್ ಬಂಕ್( filling station) ನಿರ್ಮಿಸಲು ಕೋರಿರುವ ಪ್ರಸ್ತಾವನೆಯನ್ನು ಸಭೆಯಲ್ಲಿ ಚರ್ಚಿಸಿ, ಅನುಮೋದನೆ ನೀಡಬಹುದೆಂದು ಸರ್ವಾನುಮತದ ಅಂಗೀಕಾರ ನೀಡಿತು.

**<u>6) ವಿಷಯ ಸಂಖ್ಯೆ 6:– ಅರ್ಜಿದಾರರು ಶ್ರೀ ಎಂ.ವೆಂಕಟರಮಣ ಮೂರ್ತಿ.</u>**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂ. 209/7 ರಲ್ಲಿ 0.12ಎಕರೆ 210/10ರಲ್ಲಿ 0.41 ಎಕರೆ, 210/16 ರಲ್ಲಿ 0.07ಎಕರೆ ಒಟ್ಟು 0.60ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಎಂ.ವೆಂಕಟರಮಣ ಮೂರ್ತಿ ಇವರು ಕೋರಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಮೀನಿಗೆ ಮಡಿಕೇರಿ ಸೋಮವಾರಪೇಟೆ ರಸ್ತೆಯಿಂದ ತೋಟಗಳಿಗೆ ಹೋಗುವ ಹಾಲಿ 4.00ಮೀ ಅಗಲದ ರಸ್ತೆ ಸಂಪರ್ಕವಿರುತ್ತದೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ

ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂದ ಯಾರಿಂದಲೂ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :–**ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ತಾಣವಾಗಿ ಘೋಷಿಸಿರುವುದರಿಂದ ಮಡಿಕೇರಿ ನಗರಕ್ಕೆ ಆಗಮಿಸುವ ಪ್ರವಾಸಿಗರ ಮೂಲ ಸೌಲಭ್ಯಗಳನ್ನು ಪರಿಗಣಿಸಿ, ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಬಹುದಾಗಿದೆ. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ.

**ನಿರ್ಣಯ:–** ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬಹುದೆಂದು ಶಿಫಾರಸ್ಸು ಮಾಡಿ ಸರ್ವಾನುಮತದ ಅಂಗೀಕಾರ ನೀಡಿತು.

**<u>7) ವಿಷಯ ಸಂಖ್ಯೆ 7:– ಅರ್ಜಿದಾರರು ಶ್ರೀಮತಿ ವಿ.ವಾಣಿಪ್ರಸಾದ್</u>**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂ. 209/5 ರಲ್ಲಿ 0.40ಎಕರೆ 210/8ರಲ್ಲಿ 0.16 ಎಕರೆ, 210/14 ರಲ್ಲಿ 0.04ಎಕರೆ ಒಟ್ಟು 0.60ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ರೆಸಾರ್ಟ್ ನಿರ್ಮಿಸಲು) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀಮತಿ ವಿ.ವಾಣಿಪ್ರಸಾದ್ ಇವರು ಕೋರಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಮೀನಿಗೆ ಮಡಿಕೇರಿ ಸೋಮವಾರಪೇಟೆ ರಸ್ತೆಯಿಂದ ತೋಟಗಳಿಗೆ ಹೋಗುವ ಹಾಲಿ 4.00ಮೀ ಅಗಲದ ರಸ್ತೆ ಸಂಪರ್ಕವಿರುತ್ತದೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂದ ಯಾರಿಂದಲೂ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :–** ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ತಾಣವಾಗಿ ಘೋಷಿಸಿರುವುದರಿಂದ ಮಡಿಕೇರಿ ನಗರಕ್ಕೆ ಆಗಮಿಸುವ ಪ್ರವಾಸಿಗರ ಮೂಲ ಸೌಲಭ್ಯಗಳನ್ನು ಪರಿಗಣಿಸಿ, ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಬಹುದಾಗಿದೆ. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ.

**ನಿರ್ಣಯ:–** ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬಹುದೆಂದು ಶಿಫಾರಸ್ಸು ಮಾಡಿ ಸರ್ವಾನುಮತದ ಅಂಗೀಕಾರ ನೀಡಿತು.

**<u>8) ವಿಷಯ ಸಂಖ್ಯೆ 8:– ಅರ್ಜಿದಾರರು ಶ್ರೀ ಎ.ವಿ.ಜಿ.ಕೃಷ್ಣಮೂರ್ತಿ.</u>**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂ. 209/6 ರಲ್ಲಿ 0.20ಎಕರೆ 210/9ರಲ್ಲಿ 0.38 ಎಕರೆ, 210/15 ರಲ್ಲಿ 0.02ಎಕರೆ ಒಟ್ಟು 0.60ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ರೆಸಾರ್ಟ್ ನಿರ್ಮಿಸಲು) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಎ.ವಿ.ಜಿ.ಕೃಷ್ಣಮೂರ್ತಿ ಇವರು ಕೋರಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಮೀನಿಗೆ ಮಡಿಕೇರಿ ಸೋಮವಾರಪೇಟೆ ರಸ್ತೆಯಿಂದ ತೋಟಗಳಿಗೆ ಹೋಗುವ ಹಾಲಿ 4.00ಮೀ ಅಗಲದ ರಸ್ತೆ ಸಂಪರ್ಕವಿರುತ್ತದೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂದ ಯಾರಿಂದಲೂ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :–** ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ತಾಣವಾಗಿ ಘೋಷಿಸಿರುವುದರಿಂದ ಮಡಿಕೇರಿ ನಗರಕ್ಕೆ ಆಗಮಿಸುವ ಪ್ರವಾಸಿಗರ ಮೂಲ ಸೌಲಭ್ಯಗಳನ್ನು ಪರಿಗಣಿಸಿ, ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಜಮೀನನ್ನು ಕೃಷಿ

ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಬಹುದಾಗಿದೆ. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ.

**ನಿರ್ಣಯ:–** ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬಹುದೆಂದು ಶಿಫಾರಸ್ಸು ಮಾಡಿ ಸರ್ವಾನುಮತದ ಅಂಗೀಕಾರ ನೀಡಿತು.

**9) ವಿಷಯ ಸಂಖ್ಯೆ 9:– ಅರ್ಜಿದಾರರು ಶ್ರೀ ಸುರೇಶ್ ಸಲ್ಲಗುಂಡ್ಲ**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂ. 210/11 ರಲ್ಲಿ 0.37ಎಕರೆ 210/13ರಲ್ಲಿ 0.16 ಎಕರೆ, 210/17 ರಲ್ಲಿ 0.05ಎಕರೆ ಮತ್ತು 210/18 ರಲ್ಲಿ 0.02ಎಕರೆ ಒಟ್ಟು 0.60ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ರೆಸಾರ್ಟ್ ನಿರ್ಮಿಸಲು) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಸುರೇಶ್ ಸಲ್ಲಗುಂಡ್ಲ ಇವರು ಕೋರಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಮೀನಿಗೆ ಮಡಿಕೇರಿ ಸೋಮವಾರಪೇಟೆ ರಸ್ತೆಯಿಂದ ತೋಟಗಳಿಗೆ ಹೋಗುವ ಹಾಲಿ 4.00ಮೀ ಅಗಲದ ರಸ್ತೆ ಸಂಪರ್ಕವಿರುತ್ತದೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂದ ಯಾರಿಂದಲೂ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :–**ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ತಾಣವಾಗಿ ಘೋಷಿಸಿರುವುದರಿಂದ ಮಡಿಕೇರಿ ನಗರಕ್ಕೆ ಆಗಮಿಸುವ ಪ್ರವಾಸಿಗರ ಮೂಲ ಸೌಲಭ್ಯಗಳನ್ನು ಪರಿಗಣಿಸಿ, ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಬಹುದಾಗಿದೆ. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ.

**ನಿರ್ಣಯ:–** ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬಹುದೆಂದು ಶಿಫಾರಸ್ಸು ಮಾಡಿ ಸರ್ವಾನುಮತದ ಅಂಗೀಕಾರ ನೀಡಿತು.

**10) ವಿಷಯ ಸಂಖ್ಯೆ 10:– ಅರ್ಜಿದಾರರು ಶ್ರೀ ಶ್ರೀಮನ್ನಾರಾಯಣ**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂ. 209/2 ರಲ್ಲಿ 0.27ಎಕರೆ 210/3ರಲ್ಲಿ 0.58 ಎಕರೆ ಮತ್ತು 210/5 ರಲ್ಲಿ 0.02ಎಕರೆ ಒಟ್ಟು 0.87ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ರೆಸಾರ್ಟ್ ನಿರ್ಮಿಸಲು) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಶ್ರೀಮನ್ನಾರಾಯಣ ಇವರು ಕೋರಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಮೀನಿಗೆ ಮಡಿಕೇರಿ ಸೋಮವಾರಪೇಟೆ ರಸ್ತೆಯಿಂದ ತೋಟಗಳಿಗೆ ಹೋಗುವ ಹಾಲಿ 4.00ಮೀ ಅಗಲದ ರಸ್ತೆ ಸಂಪರ್ಕವಿರುತ್ತದೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂದ ಯಾರಿಂದಲೂ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :–** ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ತಾಣವಾಗಿ ಘೋಷಿಸಿರುವುದರಿಂದ ಮಡಿಕೇರಿ ನಗರಕ್ಕೆ ಆಗಮಿಸುವ ಪ್ರವಾಸಿಗರ ಮೂಲ ಸೌಲಭ್ಯಗಳನ್ನು ಪರಿಗಣಿಸಿ, ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಬಹುದಾಗಿದೆ. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ.

**ನಿರ್ಣಯ:–** ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬಹುದೆಂದು ಶಿಫಾರಸ್ಸು ಮಾಡಿ ಸರ್ವಾನುಮತದ ಅಂಗೀಕಾರ ನೀಡಿತು.

**11) ವಿಷಯ ಸಂಖ್ಯೆ 11:– ಅರ್ಜಿದಾರರು ಶ್ರೀ ಕೊಂಗಂಟಿ ದುರ್ಗಾಪ್ರಸಾದ್**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂ. 210/4ರಲ್ಲಿ 0.99 ಎಕರೆ ಮತ್ತು 210/6 ರಲ್ಲಿ 0.18ಎಕರೆ ಒಟ್ಟು 1.17 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ರೆಸಾರ್ಟ್ ನಿರ್ಮಿಸಲು) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಕೊಂಗಂಟಿ ದುರ್ಗಾಪ್ರಸಾದ್ ಇವರು ಕೋರಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಮೀನಿಗೆ ಮಡಿಕೇರಿ ಸೋಮವಾರಪೇಟೆ ರಸ್ತೆಯಿಂದ ತೋಟಗಳಿಗೆ ಹೋಗುವ ಹಾಲಿ 4.00ಮೀ ಅಗಲದ ರಸ್ತೆ ಸಂಪರ್ಕ ಹೊಂದಿರುತ್ತದೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂಧ ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಎಂ.ಸಿ.ನಾಣಯ್ಯರವರಿಂದ ಮತ್ತು ಮಾರ್ಗದರ್ಶಿ ಸೇವಾ ಸಂಸ್ಥೆ(ರಿ), ಮಡಿಕೇರಿ ರವರುಗಳಿಂದ ಆಕ್ಷೇಪಣಾ ಅರ್ಜಿಗಳು ಸ್ವೀಕೃತವಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :–**ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ತಾಣವಾಗಿ ಘೋಷಿಸಿರುವುದರಿಂದ ಮಡಿಕೇರಿ ನಗರಕ್ಕೆ ಆಗಮಿಸುವ ಪ್ರವಾಸಿಗರ ಮೂಲ ಸೌಲಭ್ಯಗಳನ್ನು ಪರಿಗಣಿಸಿ, ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಬಹುದಾಗಿದೆ. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ.

**ನಿರ್ಣಯ:–** ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬಹುದೆಂದು ಶಿಫಾರಸ್ಸು ಮಾಡಿ ಸರ್ವಾನುಮತದ ಅಂಗೀಕಾರ ನೀಡಿತು.

**12) ವಿಷಯ ಸಂಖ್ಯೆ 12:– ಅರ್ಜಿದಾರರು ಶ್ರೀ ಸಿ.ಕೆ.ಹಮೀದ್ ಮತ್ತು ಇತರರು**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ. 94ರಲ್ಲಿನ 1.65ಎಕರೆ ಮತ್ತು ಸರ್ವೆ ನಂ. 98/2ರಲ್ಲಿನ 1.00ಎಕರೆ ಒಟ್ಟು 2.65 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ಕಾಟೇಜ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಸಿ.ಕೆ.ಹಮೀದ್ ಮತ್ತು ಇತರರು ಕೋರಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಮೀನಿಗೆ ಮಡಿಕೇರಿಯಿಂದ ಮಂಗಳೂರಿಗೆ ಹೋಗುವ ರಾಜ್ಯ ಹೆದ್ದಾರಿಯಿಂದ ತೋಟಗಳಿಗೆ ಹೋಗುವ ಹಾಲಿ 4.00ಮೀ ಅಗಲದ ರಸ್ತೆ ಸಂಪರ್ಕ ಹೊಂದಿರುತ್ತದೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ಕಾಟೇಜ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂಧ ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಎಂ.ಸಿ.ನಾಣಯ್ಯರವರು ,ಮಾರ್ಗದರ್ಶಿ ಸೇವಾ ಸಂಸ್ಥೆ(ರಿ), ಮಡಿಕೇರಿ ಮತ್ತು ಗ್ರಾಮಸ್ಥರು ಕಾಟಕೇರಿ ಗ್ರಾಮ ರವರುಗಳಿಂದ ಆಕ್ಷೇಪಣಾ ಅರ್ಜಿಗಳು ಸ್ವೀಕೃತವಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :–** ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ತಾಣವಾಗಿ ಘೋಷಿಸಿರುವುದರಿಂದ ಮಡಿಕೇರಿ ನಗರಕ್ಕೆ ಆಗಮಿಸುವ ಪ್ರವಾಸಿಗರ ಮೂಲ ಸೌಲಭ್ಯಗಳನ್ನು ಪರಿಗಣಿಸಿ, ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಬಹುದಾಗಿದೆ. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ.

**ನಿರ್ಣಯ:–** ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಮಡಿಕೇರಿ ನಗರದಲ್ಲಿ ಹೊಟೇಲ್‌ಗಳು ಹಾಗೂ ರೆಸಾರ್ಟ್‌ಗಳು ಬೆರಳೆಣಿಕೆಯಷ್ಟು ಮಾತ್ರ ಇದ್ದು, ಪ್ರವಾಸಿಗರಿಗೆ ಅನುಕೂಲತೆಗಳಿಗಿಂತ ಅನಾನುಕೂಲತೆಗಳೆ ಅಧಿಕವಾಗಿರುವುದರಿಂದ ಸದರಿ ಪ್ರದೇಶವು ಮಡಿಕೇರಿ ನಗರದಿಂದ 5ಕಿ.ಮೀ ಅಂತರದಲ್ಲಿದ್ದು, ಸದರಿ ಪ್ರದೇಶವು ವಾಣಿಜ್ಯ ಉದ್ದೇಶಕ್ಕೆ (ಕಾಟೇಜ್ ನಿರ್ಮಿಸಲು) ಸೂಕ್ತವಾಗಿರುವುದರಿಂದ, ಪ್ರವಾಸಿಗರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಅಧ್ಯಕ್ಷರು ಬಂದಿರುವ ಆಕ್ಷೇಪಣೆಗಳನ್ನು ನಗಣ್ಯಗೊಳಿಸಲು ಸೂಚಿಸಿದರು ಅದಕ್ಕೆ ಸಭೆಯು ಒಪ್ಪಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬಹುದೆಂದು ಶಿಫಾರಸ್ಸು ಮಾಡಿ ಸರ್ವಾನುಮತದ ಅಂಗೀಕಾರ ನೀಡಿತು.

**13) ವಿಷಯ ಸಂಖ್ಯೆ 13:– ಅರ್ಜಿದಾರರು ಶ್ರೀಮತಿ ರಶ್ಮಿ ದೇವಯ್ಯ**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕೆ.ನಿಡುಗಣೆ ಗ್ರಾಮದ ಸರ್ವೆ ನಂ.71/27ರಲ್ಲಿನ 1.00ಎಕರೆ ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀಮತಿ ರಶ್ಮಿ ದೇವಯ್ಯ ಇವರು ಕೋರಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಮೀನಿಗೆ ಮಡಿಕೇರಿಯಿಂದ ಗಾಳಿಬೀಡಿಗೆ ಹೋಗುವ ಹಾಲಿ 12.00ಮೀ ಅಗಲದ ರಸ್ತೆ ಸಂಪರ್ಕ ಹೊಂದಿರುತ್ತದೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂದ ಯಾರಿಂದಲೂ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :–** ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ತಾಣವಾಗಿ ಘೋಷಿಸಿರುವುದರಿಂದ ಮಡಿಕೇರಿ ನಗರಕ್ಕೆ ಆಗಮಿಸುವ ಪ್ರವಾಸಿಗರ ಮೂಲ ಸೌಲಭ್ಯಗಳನ್ನು ಪರಿಗಣಿಸಿ, ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಬಹುದಾಗಿದೆ. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ.

**ನಿರ್ಣಯ:–** ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬಹುದೆಂದು ಶಿಫಾರಸ್ಸು ಮಾಡಿ ಸರ್ವಾನುಮತದ ಅಂಗೀಕಾರ ನೀಡಿತು.

**14) ವಿಷಯ ಸಂಖ್ಯೆ 14:– ಅರ್ಜಿದಾರರು ಶ್ರೀ ಎಂ.ಮಹೇಶ್ ಶಣೈ**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದ ಸರ್ವೆ ನಂ.48/5ರಲ್ಲಿ 11.09ಎಕರೆ, 48/8ರಲ್ಲಿ 1.40ಎಕರೆ, 48/11ರಲ್ಲಿ 0.60ಎಕರೆ ಮತ್ತು 48/12ರಲ್ಲಿ 2.50ಎಕರೆ ಒಟ್ಟು 15.59ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಎಂ.ಮಹೇಶ್ ಶಣೈ ಇವರು ಕೋರಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಮೇಕೇರಿ ಗ್ರಾಮದಲ್ಲಿದ್ದು, ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಮೀನಿಗೆ ಮಡಿಕೇರಿಯಿಂದ ವಿರಾಜಪೇಟೆಗೆ ಹೋಗುವ 14ಮೀ ಅಗಲದ ರಾಜ್ಯ ಹೆದ್ದಾರಿಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂದ ಶ್ರೀ ಈಶ್ವರ ಸ್ವಸಾಯ ಸಂಘ, ಮೇಕೇರಿ ರವರಿಂದ ಆಕ್ಷೇಪಣಾ ಅರ್ಜಿಯನ್ನು ಸ್ವೀಕರಿಸಲಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :–**ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ತಾಣವಾಗಿ ಘೋಷಿಸಿರುವುದರಿಂದ ಮಡಿಕೇರಿ ನಗರಕ್ಕೆ ಆಗಮಿಸುವ ಪ್ರವಾಸಿಗರ ಮೂಲ ಸೌಲಭ್ಯಗಳನ್ನು ಪರಿಗಣಿಸಿ, ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಬಹುದಾಗಿದೆ. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ.

**ನಿರ್ಣಯ:–** ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಮಡಿಕೇರಿ ನಗರದಲ್ಲಿ ಹೊಟೇಲ್‌ಗಳು ಹಾಗೂ ರೆಸಾರ್ಟ್‌ಗಳು ಬೆರಳೆಣಿಕೆಯಷ್ಟು ಮಾತ್ರ ಇದ್ದು, ಪ್ರವಾಸಿಗರಿಗೆ ಅನುಕೂಲತೆಗಳಿಗಿಂತ ಅನಾನುಕೂಲತೆಗಳೆ ಅಧಿಕವಾಗಿರುವುದರಿಂದ ಸದರಿ ಪ್ರದೇಶವು ಮಡಿಕೇರಿ ನಗರದಿಂದ 3ಕಿ.ಮೀ ಅಂತರದಲ್ಲಿದ್ದು, ಸದರಿ ಪ್ರದೇಶವು ವಾಣಿಜ್ಯ ಉದ್ದೇಶಕ್ಕೆ (ರೆಸಾರ್ಟ್ ನಿರ್ಮಿಸಲು) ಸೂಕ್ತವಾಗಿರುವುದರಿಂದ, ಪ್ರವಾಸಿಗರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಅಧ್ಯಕ್ಷರು ಬಂದಿರುವ ಆಕ್ಷೇಪಣೆಗಳನ್ನು ನಗಣ್ಯಗೊಳಿಸಲು ಸೂಚಿಸಿದರು ಅದಕ್ಕೆ ಸಭೆಯು ಒಪ್ಪಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬಹುದೆಂದು ಶಿಫಾರಸ್ಸು ಮಾಡಿ ಸರ್ವಾನುಮತದ ಅಂಗೀಕಾರ ನೀಡಿತು.

**15) ವಿಷಯ ಸಂಖ್ಯೆ 15:– ಅರ್ಜಿದಾರರು ಶ್ರೀ ಎಸ್.ವರದರಾಜ್ ಹೆಗ್ಡೆ.**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕೆ.ನಿಡುಗಣೆ ಗ್ರಾಮದ ಸರ್ವೆ ನಂ.71/35 ರಲ್ಲಿ 1.00ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಎಸ್.ವರದರಾಜ್ ಹೆಗ್ಡೆ ಇವರು ಕೋರಿರುತ್ತಾರೆ.

ಪ್ರಸ್ತಾವಿತ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾ ಯೋಜನೆಯನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿನ ಕೃಷಿ ವಲಯದಲ್ಲಿ ಬರುತ್ತದೆ. ಹಾಗೂ ಹಾಲಿ 15.00ಮೀ ಅಗಲದ ಮಡಿಕೇರಿಯಿಂದ ಗಾಳಿಬೀಡಿಗೆ ಹೋಗುವ ರಸ್ತೆಯಿಂದ ಸಂಪರ್ಕವಿರುತ್ತದೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿರುತ್ತದೆ.
**ನಗರ ಯೋಜನಾ ಸದಸ್ಯರ ಅಭಿಪ್ರಾಯ :–**ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ತಾಣವಾಗಿ ಘೋಷಿಸಿರುವುದರಿಂದ ಮಡಿಕೇರಿ ನಗರಕ್ಕೆ ಆಗಮಿಸುವ ಪ್ರವಾಸಿಗರ ಮೂಲ ಸೌಲಭ್ಯಗಳನ್ನು ಪರಿಗಣಿಸಿ, ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಬಹುದಾಗಿದೆ. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ.
**ನಿರ್ಣಯ:–** ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬಹುದೆಂದು ಶಿಫಾರಸ್ಸು ಮಾಡಿ ಸರ್ವಾನುಮತದ ಅಂಗೀಕಾರ ನೀಡಿತು.

## 16) ವಿಷಯ ಸಂಖ್ಯೆ 16:– ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು.

**1. ಕೆ.ಟಿ.ಸಿ.ಪಿ. ಕಾಯ್ದೆ ತಿದ್ದುಪಡಿ 2005ರ ರಾಜ್ಯಪತ್ರ ಪ್ರಕಟಣೆ ಬಗ್ಗೆ.**

ಕೆ.ಟಿ.ಸಿ.ಪಿ. ಕಾಯ್ದೆ ತಿದ್ದುಪಡಿಯ ಸೆಕ್ಷನ್ 14(ಎ)ರಂತೆ ವಾಣಿಜ್ಯ ಅಥವಾ ಕೈಗಾರಿಕೆ ವಲಯದಿಂದ ವಸತಿ ವಲಯಕ್ಕೆ ಅಥವಾ ಕೈಗಾರಿಕಾ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿ ಕಟ್ಟಡ ನಿರ್ಮಿಸಲು ಅನುಮತಿ ನೀಡುವ ಕುರಿತು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 14.02.2005ರಂದು ಪ್ರಕಟಣೆಗೊಂಡ ಬಗ್ಗೆ.
ಒಪ್ಪಣಿ:– ಕರ್ನಾಟಕ ರಾಜ್ಯ ಪತ್ರದ ಪ್ರಕಟಣೆ ದಿನಾಂಕ: 14.02.2005ರಲ್ಲಿ ಕೆ.ಟಿ.ಸಿ.ಪಿ. ಕಾಯ್ದೆ 14(ಎ)ಗೆ ಸಬ್ ಸೆಕ್ಷನ್ (3) ಎಂದು ತಿದ್ದುಪಡಿ ಮಾಡಿ ಪ್ರಕಟಿಸಲಾಗಿದೆ. ತಿದ್ದುಪಡಿ ಮಾಡಿರುವ ಸೆಕ್ಷನ್ 14(ಎ) ಸಬ್ ಸೆಕ್ಷನ್ (3)ರಂತೆ ಭೂ ಉಪಯೋಗ ಬದಲಾವಣೆಯು ವಾಣಿಜ್ಯ ಅಥವಾ ಕೈಗಾರಿಕಾ ವಲಯದಿಂದ ವಸತಿ ವಲಯಕ್ಕೆ ಅಥವಾ ಕೈಗಾರಿಕೆಯಿಂದ ವಾಣಿಜ್ಯ ವಲಯಕ್ಕೆ ನಿಗಧಿಪಡಿಸಿದ ಶುಲ್ಕ (Stipulated) ಪಾವತಿಸಿಕೊಂಡು ಸ್ಥಳೀಯ ಯೋಜನಾ ಪ್ರಾಧಿಕಾರಕ್ಕೆ ಭೂ ಉಪಯೋಗ ಬದಲಾವಣೆ

ಮಾಡುವ ಬಗ್ಗೆ ಅಧಿಕಾರವನ್ನು ನೀಡಿದೆ. ಸದರಿ ತಿದ್ದುಪಡಿಯಾದ ಕಾಯ್ದೆಯ ಕ್ರಮ ಕೈಗೊಳ್ಳಲು ಪ್ರಾಧಿಕಾರದ ಸಬೆಯ ತೀರ್ಮಾನಕ್ಕೆ ಮಂಡಿಸಿದೆ.

**ನಿರ್ಣಯ:–**ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ಕರ್ನಾಟಕ ರಾಜ್ಯ ಪತ್ರದಲ್ಲಿ ಕೆ.ಟಿ.ಸಿ.ಪಿ. ಕಾಯ್ದೆ 14(ಎ)ಗೆ ಸಬ್ ಸೆಕ್ಷನ್ (3) ಎಂದು ತಿದ್ದುಪಡಿ ಮಾಡಿ ಸರ್ಕಾರವು ಹೊರಡಿಸಿರುವ ಪ್ರಕಟಣೆಯಂತೆ ಭೂ ಉಪಯೋಗ ಬದಲಾವಣೆಯು ವಾಣಿಜ್ಯ ಅಥವಾ ಕೈಗಾರಿಕೆ ವಲಯದಿಂದ ವಸತಿ ವಲಯಕ್ಕೆ ಅಥವಾ ಕೈಗಾರಿಕೆಯಿಂದ ವಾಣಿಜ್ಯ ವಲಯಕ್ಕೆ ನಿಗಧಿಪಡಿಸಿದ ಶುಲ್ಕ (Stipulated) ಪಾವತಿಸಿಕೊಂಡು ತಿದ್ದುಪಡಿಯಾದ ಕಾಯ್ದೆಯನ್ವಯ ಕ್ರಮ ಕೈಗೊಳ್ಳಬಹುದೆಂದು ಹಾಗೂ ತಿದ್ದುಪಡಿ ಆದೇಶದಂತೆ ಇಂತಹ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಇವರು ಕ್ರಮ ಕೈಗೊಳ್ಳಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**2.ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಸಿ.ನಾಣಯ್ಯರವರು ದಿನಾಂಕ: 28.09.2011ರಂದು ಪ್ರಾಧಿಕಾರಕ್ಕೆ ಪತ್ರ ಸಲ್ಲಿಸಿ, ಪತ್ರದಲ್ಲಿರುವಂತೆ ಕ್ರಮ ಜರುಗಿಸಲು ಕೋರಿರುತ್ತಾರೆ.**

ನಿರ್ಣಯ:– ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಸಿ.ನಾಣಯ್ಯರವರು ಪ್ರಾಧಿಕಾರಕ್ಕೆ ಸಲ್ಲಿಸಿರುವ ಪತ್ರದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಮಾನ್ಯ ಸದಸ್ಯರು ಸಭೆಗೆ ಹಾಜರಾಗಿ ಅವರ ಸಲಹೆ ಸೂಚನೆಗಳನ್ನು ಸಭೆಯಲ್ಲಿ ತಿಳಿಸಿದಾಗ ವಿಷಯವನ್ನು ಪರಿಶೀಲಿಸಲಾಗುವುದು ಹಾಗೂ ನಡಾವಳಿಯ ಭಾಗವಾಗಿ ಸೇರಿಸಿಕೊಳ್ಳಲಾಗುವುದು. ಇವರು ಸಭೆಗೆ ಗೈರು ಹಾಜರಾಗಿರುವುದರಿಂದ ಅವರ ಪತ್ರದಂತೆ ನಿರ್ಣಯ ಕೈಗೊಳ್ಳುವುದು ಸೂಕ್ತವಲ್ಲವೆಂದು ಪ್ರಾಧಿಕಾರದ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು. ಅದರಂತೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಸಹಿ/–**
**(ಶ್ರೀ ಪಿ.ಸಜಿಲ್ ಕೃಷ್ಣ)**
**ಅಧ್ಯಕ್ಷರು ,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**

**ಸಹಿ/–**
**(ಶ್ರೀ ಅಶಾದ್ ಉರ್ ರೆಹೆಮಾನ್ ಷರೀಫ್)**
**ಆಯುಕ್ತರು,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**